FRNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ-III<br>Part-III | ಬೆಂಗಳೂರು,. ಸೋಮವಾರ, ಅಕ್ಟೋಬರ್ ೧೪, ೨೦೧೯ (ಆಶ್ವಯುಜ ೨೨, ಶಕ ವರ್ಷ ೧೯೪೦)<br>Bengaluru, Monday, October 14, 2019 (Ashwayuja 22, Shaka Varsha 1940) | ನಂ: ೮೫೭<br>No. 857 |
|---|---|---|

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಗ್ರಾಅಪ 215 ಜಿಪಸ 2018(4), ಬೆಂಗಳೂರು, ದಿನಾಂಕ: 14-10-2019

ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 138 ಭೂದಾಪು 2017 ದಿನಾಂಕ:08-02-2018ರಲ್ಲಿ ಕೆಳಗಿನ ಕೋಷ್ಟಕದ ಕಾಲಂ ಸಂಖ್ಯೆ(5) ರಲ್ಲಿ ನಮೂದಿಸಿರುವ ಚಿಕ್ಕೋಡಿ ತಾಲ್ಲೂಕು ವ್ಯಾಪ್ತಿಯನ್ನು ಬದಲಾಯಿಸಿ ಕೋಷ್ಟಕದ ಕಾಲಂ ಸಂಖ್ಯೆ(2)ರ ನಿಪ್ಪಾಣಿ ತಾಲ್ಲೂಕನ್ನು ರಚಿಸಿರುವುದರಿಂದ,

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 119 ಮತ್ತು 302(ಎ) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೋಷ್ಟಕದ ಕಾಲಂ (4) ರಲ್ಲಿ ನಮೂದಿಸಿರುವ ಗ್ರಾಮಗಳನ್ನು ಒಳಗೊಂಡಿರುವಂತಹ ನಿಪ್ಪಾಣಿ ತಾಲ್ಲೂಕು ಪಂಚಾಯಿತಿಯನ್ನು 14-10-2019ರ ದಿನಾಂಕದಿಂದ ಜಾರಿಗೆ ಬರುವಂತೆ ಕಾಲಂ ಸಂಖ್ಯೆ(3) ರಲ್ಲಿ ನಮೂದಾಗಿರುವ ಕೇಂದ್ರ ಸ್ಥಾನವನ್ನು ಒಳಗೊಂಡಂತೆ ಈ ಮೂಲಕ ರಚಿಸಿ ಆದೇಶಿಸಿದೆ. ಕೋಷ್ಟಕದ ಕಾಲಂ (4)ರಲ್ಲಿ ನಮೂದಿಸಿರುವ ಗ್ರಾಮಗಳನ್ನು ಕೋಷ್ಟಕ (5)ರಲ್ಲಿ ನಮೂದಾಗಿರುವ ತಾಲ್ಲೂಕು ಪಂಚಾಯಿತಿಯಾದ ಚಿಕ್ಕೋಡಿ ವ್ಯಾಪ್ತಿಯಿಂದ ಕೈಬಿಡಲಾಗಿದೆ.

| ಕ್ರ ಸಂ. | ತಾಲ್ಲೂಕು ಪಂಚಾಯಿತಿ ಹೆಸರು | ತಾಲ್ಲೂಕು ಪಂಚಾಯಿತಿ ಕೇಂದ್ರಸ್ಥಾನ | ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಗ್ರಾಮಗಳು | ಯಾವ ತಾಲ್ಲೂಕಿನಿಂದ ಈ ಗ್ರಾಮಗಳು ಹೊಸ ತಾಲ್ಲೂಕು ಪಂಚಾಯಿತಿಗೆ ಸೇರ್ಪಡೆಗೊಂಡಿದೆ. |
|---|---|---|---|---|
| (1) | (2) | (3) | (4) | (5) |
| 1. | ನಿಪ್ಪಾಣಿ | ನಿಪ್ಪಾಣಿ | ನಿಪ್ಪಾಣಿ | ಚಿಕ್ಕೋಡಿ |
| 2. | | | ಕೋಗನೊಳ್ಳಿ | |
| 3. | | | ಹನಬಾರ್ವಾಡಿ (ಹ್ಯಾಮ್ಲೆಟ್) | |
| 4. | | | ಜತ್ರಾಟ್ | |
| 5. | | | ಶಿರಪೆವಾಡಿ (ಹ್ಯಾಮ್ಲೆಟ್) | |
| 6. | | | ಲಖನಾಪುರ | |
| 7. | | | ಪಡಲಿಹಾಳ | |
| 8. | | | ಶಿರಗುಪ್ಪಿ | |
| 9. | | | ಕೊಡ್ನಿ | |
| 10. | | | ಗಾಯಕನವಾಡಿ (ಹ್ಯಾಮ್ಲೆಟ್) | |
| 11. | | | ಶೆಂಡೂರು | |
| 12. | | | ಗೊಂದಿಕುಪ್ಪಿ | |
| 13. | | | ಸೌಂದಲ್ಗಾ | |
| 14. | | | ಹಂಚಿನಾಳ ಕೆ.ಎಸ್ | |
| 15. | | | ಕುರ್ಲಿ | |

| | | | | |
|---|---|---|---|---|
| 16. | | | ಯರ್ನಾಳ | ಚಿಕ್ಕೋಡಿ |
| 17. | | | ಅಮಲಜರಿ (ಹ್ಯಾಮ್ಲೆಟ್) | |
| 18. | | | ಗವನ್ | |
| 19. | | | ತವಂದಿ | |
| 20. | | | ಅಪ್ಪಾಚಿವಾಡಿ | |
| 21. | | | ಅಕ್ಕೋಳ | |
| 22. | | | ಪಂಗೇರಿ-ಬಿ | |
| 23. | | | ಬುಡಲಮುಖ್ | |
| 24. | | | ಯಮಗರ್ಣಿ | |
| 25. | | | ನಾಗನೂರ | |
| 26. | | | ಬೂದಿಹಾಳ | |
| 27. | | | ಭೇನಾಡಿ | |
| 28. | | | ಬೊಲೇವಾಡಿ (ಹ್ಯಾಮ್ಲೆಟ್) | |
| 29. | | | ಮತ್ತಿವಾಡೆ | |
| 30. | | | ಅಡಿ | |
| 31. | | | ಹದನಾಳ | |
| 32. | | | ಭಟನಾಗನೂರ | |
| 33. | | | ಭಿವಾಶಿ | |
| 34. | | | ಸುಳಗಾಂವ | |
| 35. | | | ಬೋರಗಾಂವ (ಟಿ.ಎಂ.ಸಿ) | |
| 36. | | | ಬೇಡಕಿಹಾಳ | |
| 37. | | | ಸಿದ್ನಾಳ | |
| 38. | | | ಕುನ್ನೂರ | |
| 39. | | | ಶಿವಪುರವಾಡಿ (ಹ್ಯಾಮ್ಲೆಟ್) | |
| 40. | | | ಗಜಬರವಾಡಿ (ಹ್ಯಾಮ್ಲೆಟ್) | |
| 41. | | | ಮಣಕಾಪುರ್ | |
| 42. | | | ಹುನ್ನರಗಿ | |
| 43. | | | ಭೋಜ್ | |
| 44. | | | ಶಿರಡಾವಾಡ್ | |
| 45. | | | ಗಲಟಗಾ | |
| 46. | | | ಭೀಮಪುರವಾಡಿ (ಹ್ಯಾಮ್ಲೆಟ್) | |
| 47. | | | ದಿಲಾಲಪುರವಾಡಿ (ಹ್ಯಾಮ್ಲೆಟ್) | |
| 48. | | | ಹಲದಟ್ಟಿ (ಹ್ಯಾಮ್ಲೆಟ್) | |
| 49. | | | ಮಮದಾಪುರ ಕೆ.ಎಲ್ | |
| 50. | | | ಕರಡಗಾ | |
| 51. | | | ಬೋರಗಾಂವವಾಡಿ (ಹ್ಯಾಮ್ಲೆಟ್) | |
| 52. | | | ಧೋಣೇವಾಡಿ (ಹ್ಯಾಮ್ಲೆಟ್) | ಚಿಕ್ಕೋಡಿ |
| 53. | | | ಕಸನಾಳ್ | |
| 54. | | | ಬರವಾಡ್ | |
| 55. | | | ಮಂಗೂರ್ | |

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 119 ಮತ್ತು 120 ರಲ್ಲಿ ನಿರ್ದಿಷ್ಟಪಡಿಸಿರುವಂತೆ ಹಾಗೂ ಪ್ರಕರಣ 302(ಎ)ರ ಜೊತೆ ಓದಿಕೊಂಡಂತೆ ತಾಲ್ಲೂಕು ಪಂಚಾಯಿತಿಯ ಸದಸ್ಯರ ಹುದ್ದೆಯ ಅವಧಿಯಲ್ಲಿ ಅಂತಹ ತಾಲ್ಲೂಕು ಪರಿಮಿತಿಗಳನ್ನು ಬದಲಾವಣೆ ಮಾಡಿ ಹೊಸ ತಾಲ್ಲೂಕನ್ನು ರಚಿಸಿ, ಅಂತಹ ರಚನೆಯಾದ ಹೊಸ ತಾಲ್ಲೂಕು ಪಂಚಾಯಿತಿಗೆ ಸೇರ್ಪಡೆಯಾದ ಪ್ರದೇಶದ ಪೂರ್ಣ ಅಥವಾ ಬಹುಭಾಗವು ಇರುವ ಚುನಾವಣಾ ಕ್ಷೇತ್ರಗಳನ್ನು ಪ್ರತಿನಿಧಿಸುವ ತಾಲ್ಲೂಕು ಪಂಚಾಯತ್ ಸದಸ್ಯರನ್ನು ಹೊಂದಿರತಕ್ಕದ್ದು. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು

ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 133 ರಡಿ ಸಂಬಂಧಿಸಿದ ಪ್ರಾದೇಶಿಕ ಆಯುಕ್ತರು ಹೊಸದಾಗಿ ರಚನೆಯಾಗಿರುವ ತಾಲ್ಲೂಕು ಪಂಚಾಯಿತಿಗೆ ಮತ್ತು ಅಸ್ತಿತ್ವದಲ್ಲಿರುವ ತಾಲ್ಲೂಕು ಪಂಚಾಯಿತಿಗೆ ಸದಸ್ಯರನ್ನು ಅಧಿಸೂಚಿಸತಕ್ಕದ್ದು.

ಅಸ್ತಿತ್ವದಲ್ಲಿದ್ದ ತಾಲ್ಲೂಕು ಪಂಚಾಯಿತಿಯಲ್ಲಿ ನಿಹಿತವಾಗಿರುವ ಖರ್ಚು ಮಾಡದೇ ಉಳಿದ ನಿಧಿ ಮತ್ತು ಎಲ್ಲಾ ಇತರೆ ಸ್ವತ್ತುಗಳನ್ನು ಸಂಬಂಧಪಟ್ಟ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಶೇ.50ರಷ್ಟು ನಿಧಿಯನ್ನು ಪ್ರದೇಶದ ವಿಸ್ತೀರ್ಣದ ಆಧಾರದ ಮೇಲೆ ಮತ್ತು ಶೇ.50ರಷ್ಟು ನಿಧಿಯನ್ನು ಜನಸಂಖ್ಯೆ ಆಧಾರದ ಮೇಲೆ ವಿಭಜಿಸಿ ಸಂಬಂಧಿಸಿದ ತಾಲ್ಲೂಕು ಪಂಚಾಯಿತಿಗಳಿಗೆ ವರ್ಗಾಯಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಕೆ.ಎಸ್.ಮಹಾಲಕ್ಷ್ಮೀ**
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 200